ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ 2ನೇ ಸೆಪ್ಟೆಂಬರ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಂಡಿತು:

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಜಿ. ಪುಟ್ಟಸ್ವಾಮಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಕೆ. ಸೂರ್ಯನಾರಾಯಣರಾವ್, ಗಟ್ಟಿ ಚಂದ್ರಶೇಖರ್ ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಜಿ.ವೃಷಭೇಂದ್ರಪ್ಪ ಅವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಜಿ. ಪುಟ್ಟಸ್ವಾಮಿ ಅವರು ದಿನಾಂಕ 1-9-97ರಂದು ನಿಧನರಾದರು. ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಐ.ಎನ್.ಟಿ.ಯು.ಸಿ.ಯ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ, ಎನ್.ಎಸ್.ಎಸ್. ಮಂಡಳಿಯ ಸದಸ್ಯರಾಗಿ, ವಿಶಾಲ ಮೈಸೂರು ರೈತ ಸಂಘ ಹಾಗೂ ವನ್ಯ ಮೃಗಗಳ ಸಂರಕ್ಷಣ ಸಮಿತಿಯ ಅಧ್ಯಕ್ಷರಾಗಿ, ಸಮಾಜ ಸೇವಕರಾಗಿ ಹರಿಜನ ಬಡಾವಣೆಯ ನಿರ್ಮಾಣಕ್ಕಾಗಿ, ಪರಿಶಿಷ್ಟಜನರಿಗೆ ವಸತಿ ಶಾಲೆ, ಬಡಾವಣೆ ನಿರ್ಮಾಣ ಹಾಗೂ ಕಸಾಯಿ ಪದ್ದತಿಯ ನಿರ್ಮೂಲನಕ್ಕಾಗಿ ಅವಿರತವಾಗಿ ಶ್ರಮಿಸಿರುತ್ತಾರೆ.

2. ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಶಾಸಕರಾಗಿದ್ದ ಶ್ರೀ ಕೆ.ಎಸ್. ಸೂರ್ಯನಾರಾಯಣರಾವ್ ಅವರು ದಿನಾಂಕ 1-9-97ರಂದು ನಿಧನರಾದರು. ಇವರು ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ, ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ, ಮೈಸೂರು ಲ್ಯಾಬ್ ಮತ್ತು ಪೈಂಟ್ ವರ್ಕ್ಸ್ ಕಂಪನಿಯ ಅಧ್ಯಕ್ಷರಾಗಿ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದ ಶ್ರೀಯುತರು 1957ರಿಂದ 1967ರ ಅವಧಿಯಲ್ಲಿ ಮೈಸೂರಿನಿಂದ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗಟ್ಟಿ ಚಂದ್ರಶೇಖರ್ ಅವರು ದಿನಾಂಕ 1.9.97ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರು ಹಾಗೂ ವ್ಯಾಪಾರಸ್ಥರು ಆಗಿದ್ದ ಶ್ರೀಯುತರು ಸಿದ್ದಗಂಗಾ ತಾಂತ್ರಿಕ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಹೋಂಗಾರ್ಡ್ ಸದಸ್ಯರು ಹಾಗೂ ನಿಯಂತ್ರಣಾಧಿಕಾರಿಯಾಗಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವುದರ ಜೊತೆಗೆ 1972-83ರ ಅವಧಿಯಲ್ಲಿ ಗುಬ್ಬಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

4. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಜಿ. ವೃಷಭೇಂದ್ರಪ್ಪನವರು ದಿನಾಂಕ 18.8.97ರಂದು ನಿಧನರಾದರು. ಶ್ರೀಯುತರು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್ ಪರಶುರಾಂಪುರ ಹೋಬಳಿ ಕೊರ್ಲಕುಂಟೆ ಗ್ರಾಮದಲ್ಲಿ ಜನಿಸಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದ ಶ್ರೀಯುತರು 1941-45ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಚಳ್ಳಕೆರೆ ತಾಲ್ಲೂಕನ್ನು ಪ್ರತಿನಿಧಿಸಿದ್ದರು.

ಮೃತರಾದ ಸದಸ್ಯರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ವಿತ್ತೀಯ ಕಾರ್ಯಕಲಾಪ ತೆಗೆದುಕೊಳ್ಳೋಣ. ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ತಾವು ಅದನ್ನು ನಿಯಮ 60ರ ಕೆಳಗೆ ಕೊಟ್ಟಿದ್ದೀರಿ ಅದನ್ನು ಪ್ರಸ್ತಾಪ ಮಾಡುತ್ತೀರೋ ?

ನಿಲುವಳಿ ಸೂಚನೆ
(ಮಂಡನೆಗೆ ಅನುಮತಿ ಕೋರಿಕೆ)

ಹಾಸನ ಜಿಲ್ಲಾ ಹೇಮಾವತಿ ಮಹಿಳಾ ಸರ್ಕಾರಿ ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಉಂಟಾದ ಗಲಭೆ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಹೇಮಾವತಿ ಮಹಿಳಾ ಸಹಕಾರಿ ಬ್ಯಾಂಕ್‌ನ ಪ್ರಥಮ ಸರ್ವ ಸದಸ್ಯರ ಸಭೆ 30ನೇ ತಾರೀಖು ಹಾಸನ ಜಿಲ್ಲೆಯಲ್ಲಿ ಕರೆಯಲಾಗಿತ್ತು. ಆದರೆ ತಮಗೆ ಗೊತ್ತಿದೆ, ಹೇಮಾವತಿ ಮಹಿಳಾ ಸಹಕಾರಿ ಬ್ಯಾಂಕ್, ಈ ಒಂದು ಸಹಕಾರಿ ಬ್ಯಾಂಕ್‌ನ ಪ್ರಥಮ ಸರ್ವ ಸದಸ್ಯರ ಸಭೆ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಕರೆಯಲಾಗಿತ್ತು. ಆದರೆ ಏಕೋ ಪ್ರಾರಂಭದಿಂದಲೇ ಇದಕ್ಕೆ ಗ್ರಹ ಬಡಿದಿದೆ. ಪ್ರಥಮದಲ್ಲಿ ಈ